

# ಕಾಡುವ ಕೊಲೊರೆಕ್ಟಲ್ ಕ್ಯಾನ್ಸರ್

**ಗುದನಾಳ ಮತ್ತು ದೊಡ್ಡ ಕರುಳಿನಲ್ಲಿ ಅಸಹಜ ಜೀವಕೋಶಗಳು ಬೆಳೆಯುವುದರಿಂದ ಕೊಲೊರೆಕ್ಟಲ್ ಕ್ಯಾನ್ಸರ್ ಬರುತ್ತದೆ. ಇದರ ಆರಂಭಿಕ ಪತ್ತೆ ಕಷ್ಟವಾದರೂ ಮಲವಿಸರ್ಜನೆಯಲ್ಲಿ ನಿರಂತರವಾಗಿ ಸಮಸ್ಯೆ ಬಂದರೆ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಳ್ಳುವುದು ಒಳಿತು. ನಿಖರವಾಗಿ ಪತ್ತೆಯಾದರೆ ಚಿಕಿತ್ಸೆ ಮೂಲಕ ಸಂಪೂರ್ಣ ಗುಣಮುಖರಾಗಬಹುದು.**

■ ಉಮಾ ಅನಂತ್

ದೊಡ್ಡ ಕರುಳು ಮತ್ತು ಗುದನಾಳದ ಒಂದು ಭಾಗದಲ್ಲಿ ಅನಗತ್ಯ ಜೀವಕೋಶಗಳು ಬೆಳವಣಿಗೆಯಾಗುವುದೇ ಕೊಲೊರೆಕ್ಟಲ್ ಅಥವಾ ಕೋಲನ್ ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ಕೋಲನ್ ಎಂದರೆ ದೊಡ್ಡ ಕರುಳಿನ ಉದ್ದವಾದ ಭಾಗ. ದೊಡ್ಡ ಕರುಳು ಜೀರ್ಣಾಂಗ ವ್ಯವಸ್ಥೆಯ ಕೊನೆಯ ಭಾಗವಾಗಿದೆ. ಕೋಲನ್ ಕ್ಯಾನ್ಸರ್ ಯಾವ ವಯಸ್ಸಿನಲ್ಲಾದರೂ ಬರಬಹುದು. ಇದನ್ನು ಕೊಲೊರೆಕ್ಟಲ್ ಕ್ಯಾನ್ಸರ್ ಎಂದೂ ಕರೆಯಲಾಗುತ್ತದೆ. ಇದು ಗುದನಾಳದ ಕ್ಯಾನ್ಸರ್ ಎಂದೂ ಹೆಸರಾಗಿದೆ. ಈ ಕ್ಯಾನ್ಸರ್ ಆರಂಭದಲ್ಲಿ ಯಾವುದೇ ಲಕ್ಷಣಗಳನ್ನು ತೋರಿಸುವುದಿಲ್ಲ. ಕ್ರಮೇಣ ಅತಿಸಾರ ಅಥವಾ ಮಲಬದ್ಧತೆ, ಮಲದಲ್ಲಿ ರಕ್ತ, ಗುದನಾಳದಲ್ಲಿ ರಕ್ತಸ್ರಾವ, ಆಯಾಸ ಮುಂತಾದ ತೊಂದರೆಗಳು ಕಾಡಲಾರಂಭಿಸುತ್ತವೆ.

### ಕಾರಣಗಳೇನು?

ಕೋಲನ್ ಕ್ಯಾನ್ಸರ್‌ಗೆ ನಿಖರವಾದ ಕಾರಣ ಇನ್ನೂ ತಿಳಿದುಬಂದಿಲ್ಲ. ಬಹುತೇಕ ಬೇರೆಲ್ಲ ಕ್ಯಾನ್ಸರ್‌ಗಳಂತೆ ಇದೂ ಆನುವಂಶೀಯವಾಗಿ ಬರುತ್ತದೆ. ಜೊತೆಗೆ ಬದಲಾದ ಜೀವನಶೈಲಿ, ಆಹಾರ ಪದ್ಧತಿ, ಧೂಮಪಾನ, ಮದ್ಯಪಾನ ಬೊಜ್ಜು, ಮಧುಮೇಹ ಮುಂತಾದವುಗಳಿಂದ ಬರುತ್ತದೆ ಎನ್ನುತ್ತಾರೆ ವೈದ್ಯಕೀಯ ತಜ್ಞರು. ಇವಿಷ್ಟೇ ಅಲ್ಲದೆ ನಿರಂತರ ಕೆಮ್ಮು, ಮೂಳೆ ನೋವು, ಉಸಿರಾಟದ ತೊಂದರೆ, ಕಾಮಾಲೆ ಕೈಕಾಲುಗಳಲ್ಲಿ ಊತ ಮುಂತಾದ ಸಮಸ್ಯೆಗಳು ಕಂಡುಬಂದಲ್ಲಿ ತಜ್ಞ ವೈದ್ಯರಿಂದ ಸಂಪೂರ್ಣ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ.

‘ಕೊಲೊರೆಕ್ಟಲ್ ಕ್ಯಾನ್ಸರ್ ಕೋಲನ್ ಅಥವಾ ಗುದನಾಳದಲ್ಲಿ ಕಾಣಿಸಿಕೊಳ್ಳುತ್ತದೆ. ಜೀವಕೋಶಗಳು ಅಸಹಜವಾಗಿ ಮತ್ತು ನಿಯಂತ್ರಣವಿಲ್ಲದೆ ವಿಭಜಿಸಿ ಗಡ್ಡೆಯಾಗಿ ಬದಲಾಗಿ ಕೋಲೊರೆಕ್ಟರ್ ಕ್ಯಾನ್ಸರ್ ಬರುತ್ತದೆ’ ಎಂದು ಹೇಳುತ್ತಾರೆ ಬೆಂಗಳೂರಿನ ಅಪೋಲೊ ಕ್ಯಾನ್ಸರ್ ಸೆಂಟರ್‌ನ ಸರ್ಜಿಕಲ್ ಆಂಕಾಲಜಿ ವಿಭಾಗದ ವೈದ್ಯಾಧಿಕಾರಿ ಡಾ. ಯಶ್ವಂತ್ ಆರ್.

‘ಭಾರತದಲ್ಲಿ ಮಹಿಳೆಯರಿಗೆ ಹೋಲಿಸಿದರೆ ಪುರುಷರಲ್ಲಿ ಕರುಳಿನ ಕ್ಯಾನ್ಸರ್ ಮತ್ತು ಗುದನಾಳದ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಕೊಲೊರೆಕ್ಟಲ್ ಕ್ಯಾನ್ಸರ್ ಮಾರಣಾಂತಿಕವಾಗಿದ್ದು, ಮಾರಕ ಕ್ಯಾನ್ಸರ್‌ಗಳಲ್ಲಿ ಎರಡನೇ ಸ್ಥಾನದಲ್ಲಿದೆ’ ಎನ್ನುತ್ತಾರೆ ಅವರು.

### ಕೋಲ್ಫಿಟ್ ಪರಿಣಾಮಕಾರಿ

ಇತರ ಕ್ಯಾನ್ಸರ್‌ಗಳಂತೆ ಕೋಲನ್ ಕ್ಯಾನ್ಸರ್ ಪ್ರಕರಣಗಳು ಕೂಡ ಇತ್ತೀಚಿನ ದಿನಗಳಲ್ಲಿ ಗಣನೀಯವಾಗಿ ಹೆಚ್ಚುತ್ತಿದೆ. ಇದನ್ನು ಆರಂಭದಲ್ಲೇ ಪತ್ತೆ ಹಚ್ಚಲು ಬೆಂಗಳೂರಿನ ಅಪೋಲೊ ಕ್ಯಾನ್ಸರ್ ಸೆಂಟರ್ ಹೊಸದಾದ ಸ್ಕ್ರೀನಿಂಗ್ ತಂತ್ರಜ್ಞಾನವನ್ನು ಕಂಡುಹಿಡಿದಿದ್ದು, ‘ಕೋಲ್ಫಿಟ್’ ಹೆಸರಿನ ಸಾಧನವೊಂದನ್ನು ಪರಿಚಯಿಸಿದೆ. ಇದು ಕೋಲನ್ ಕ್ಯಾನ್ಸರ್ ಅನ್ನು ಪತ್ತೆ ಹಚ್ಚುವುದರ ಮೂಲಕ ಬಹುಮಂದಿ ಈ ಕ್ಯಾನ್ಸರ್‌ನಿಂದ ಹೈರಾಣಾಗುವುದನ್ನು ತಪ್ಪಿಸಲು ಸಾಧ್ಯ ಎಂಬುದು ಇಲ್ಲಿನ ತಜ್ಞರ ಅಭಿಮತ. ಸಾಮಾನ್ಯವಾಗಿ ಈ ಕ್ಯಾನ್ಸರ್ ಅನ್ನು ಕೊಲೊನೋಸ್ಕೋಪಿ ಮೂಲಕ ಪತ್ತೆ ಹಚ್ಚಬಹುದು. ಅಪೋಲೊ ಕ್ಯಾನ್ಸರ್ ಸೆಂಟರ್ ಪರಿಚಯಿಸಿದ ಈ ಕೋಲ್ಫಿಟ್ ಮೂಲಕ ನಿಖರ ಸ್ಕ್ರೀನಿಂಗ್ ಮಾಡಬಹುದಾಗಿದ್ದು, ಇದು ಮಲದಲ್ಲಿನ ಕ್ಯಾನ್ಸರ್‌ಕಾರಕ ಅಂಶವನ್ನು ಕಂಡುಹಿಡಿಯುತ್ತದೆ.

‘ಕ್ಯಾನ್ಸರ್ ಪೂರ್ವ ಹಂತದಲ್ಲಿ ರೋಗ ಪತ್ತೆಯಾದರೆ, ಯಾವುದೇ ಶಸ್ತ್ರಚಿಕಿತ್ಸೆಗಳಿಲ್ಲದೆ ಎಂಡೊಸ್ಕೋಪಿಕ್ ಮೂಲಕ ಚಿಕಿತ್ಸೆ ನೀಡಬಹುದು. ಒಂದನೆ ಹಂತ ದಾಟಿದ ಪ್ರಕರಣಗಳು ಮತ್ತು ಹೆಚ್ಚಿನ ಎರಡನೆ ಹಂತದ ಪ್ರಕರಣಗಳಿಗೆ ವಿಕಿರಣ ಮತ್ತು ಕೀಮೊಥೆರಪಿ ಅಗತ್ಯವಿಲ್ಲದೆ ಶಸ್ತ್ರಚಿಕಿತ್ಸೆಯ ಮೂಲಕ ಮಾತ್ರ ಚಿಕಿತ್ಸೆ ನೀಡಲಾಗುತ್ತದೆ. ಕೊಲೊರೆಕ್ಟಲ್ ಕ್ಯಾನ್ಸರ್‌ನ ಶಸ್ತ್ರಚಿಕಿತ್ಸೆಯನ್ನು ರೊಬೋಟಿಕ್ ಮೂಲಕವೂ ಮಾಡಬಹುದು. ಇದರಲ್ಲಿ ರೋಗಿಯು ಬಹಳ ಸಣ್ಣ ಛೇದನದೊಂದಿಗೆ ಶಸ್ತ್ರಚಿಕಿತ್ಸೆಗೆ ಒಳಗಾಗಬಹುದು’ ಎನ್ನುತ್ತಾರೆ ಡಾ. ಯಶ್ವಂತ್.

ಮಹಿಳೆಯರು ಸ್ತನ ಕ್ಯಾನ್ಸರ್, ಗರ್ಭಕೊರಳಿನ ಕ್ಯಾನ್ಸರ್ ತಪಾಸಣೆಯನ್ನು ಮಾಡಿಸಿಕೊಳ್ಳಬೇಕು. ಪುರುಷರಲ್ಲಿ ಕೊಲೊರೆಕ್ಟಲ್ ಕ್ಯಾನ್ಸರ್ ಹೆಚ್ಚಾಗಿ ಕಂಡುಬರುವ ಕಾರಣ ಜೀವನಶೈಲಿ ಬದಲಾವಣೆ ಮಾಡಿಕೊಂಡು ಆಗಾಗ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ■